**ಓ ಎಸ್ ನಂಃ 388/2014**

**ಪಿ. ಡಬ್ಲ್ಯೂ ಃ 1**

**ದಿಃ 10.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಹೆಚ್ಚುವರಿ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಸಿ ಎನ್ ವಕೀಲರಿಂದ**

**ನನ್ನ ಹೆಚ್ಚುವರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಹೆಚ್ಚುವರಿ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

ಓ ಎಸ್ **231/1996** ರಲ್ಲಿ ಆದ ತೀರ್ಪಿನ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಪಿ **101** ಎಂದು, ಆ ದಾವೆಯಲ್ಲಿ ಸಲ್ಲಿಸಿದ ವಿಲ್ ನ ದೃಢೀಕೃತ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಪಿ **102** ಎಂದು, ಅದರ ಕನ್ನಡ ಟೈಪ್ ಮಾಡಿದ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಪಿ **102** ಎ ಎಂದು ಗುರುತಿಸಲಾಯಿತು. ದಾವೆಯಲ್ಲಿ ಕೋರಿರುವಂತೆ ದಾವೆಯನ್ನು ಡಿಕ್ರಿ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ 19 , 22 ರಿಂದ 24 ರವರ ಪರ ಶ್ರೀ ಎ ಟಿ ಕೆ ವಕೀಲರಿಂದಃ**

ವಿಲ್ ನ್ನು ನಮ್ಮ ತಾತ ಮಾಡಿದ್ದಾರೆ. ಆ ವಿಲ್ ಮಾಡಿ ಸುಮಾರು 60 ರಿಂದ 70 ವರ್ಷಗಳಾಗಿರಬಹುದು. ಬೇರೆ ಅಣ್ಣ ತಮ್ಮಂದಿರು ಭಾಗಕ್ಕೆ ಬರುತ್ತಾರೆ ಎಂಬ ಕಾರಣಕ್ಕೆ ನಮ್ಮ ತಾತ ವಿಲ್ ಮಾಡಿಕೊಟ್ಟಿದ್ದಾರೆ. ನಮ್ಮ ತಾತನ ಅಣ್ಣ ತಮ್ಮಂದಿರು ಬರಬಹುದು ಎಂದು ಅವರು ವಿಲ್ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ವಿಲ್ ಮೂಲಕ ನಮ್ಮ ತಾತ ಮಹಿಮಕ್ಕನ 4 ಜನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ವಿಲ್ ಮಾಡಿದ ಸ್ವತ್ತುಗಳಲ್ಲದೆ ನಮ್ಮ ತಾತನ ಹೆಸರಿನಲ್ಲಿ ಸ.ನಂ. 25/7, ಸ.ನಂ. 31, ಮತ್ತು ಸ.ನಂ. 32 ಇವುಗಳು ರಾಂಪುರ ಮತ್ತು ಯಲಚಗುಪ್ಪೆ ಗ್ರಾಮದ ಸ್ವತ್ತುಗಳು ನಮ್ಮ ತಾತನಿಗೆ ಉಳಿದಿದ್ದವು. ವಿಲ್ ಬರೆದ ಸ್ವತ್ತುಗಳು ಹನುಮಯ್ಯ ಇವರ ಹೆಸರಿನಲ್ಲಿದ್ದವು ಎಂದು ತೋರಿಸಲು ನಾನು ಯಾವುದೆ ದಾಖಲೆ ಕೊಟ್ಟಿಲ್ಲ. ನಮ್ಮ ತಾತ ಗುತ್ತಿಗೆ ಆಧಾರದ ಮೇಲೆ ಆ ಸ್ವತ್ತನ್ನು ಉಳುಮೆ ಮಾಡುತ್ತಿದ್ದರು.

ನಿ ಪಿ 19 ಇದನ್ನು ನಮ್ಮ ತಾತ ಹನುಮಯ್ಯ ಹಾಕಿರಲಿಲ್ಲ, ಮರಿಚನ್ನಯ್ಯ ಹಾಕಿದ್ದರು ಎಂದರೆ ಸರಿ. ನಿ ಪಿ 19 ರಲ್ಲಿ ಹನುಮಯ್ಯ ಇವರು ಮಕ್ಕಳು ವಿಲ್ ನಲ್ಲಿ ಬರೆದ ಸ್ವತ್ತುಗಳನ್ನು ವ್ಯವಸಾಯ ಮಾಡುತ್ತಿದ್ದರು ಎಂದು ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಾತ ವಿಲ್ ಮಾತ್ರ ಮಾಡಿದ್ದಾರೆ, ಆದರೆ ಆ ಪ್ರಕಾರ ಭಾಗ ಆಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಿಲ್ ಮೂಲಕ ವಿಭಾಗವಾಗಿ ಆ ಪ್ರಕಾರ ಖಾತೆಯಾಗಿದೆ ಎಂದರೆ ಸರಿ. ಆದರೆ ಪ್ರತ್ಯೇಕವಾಗಿ ಖಾತೆಯಾಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾವು ಖಾತೆ ಮಾಡಿಸಿಕೊಳ್ಳಲು ಪ್ರಯತ್ನ ಮಾಡಿದ್ದೇವು , ಆದರೆ ನಮ್ಮ ದೊಡ್ಡಪ್ಪಂದಿರು ಒಪ್ಪಿಗೆ ಕೊಡಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಿಲ್ ಪ್ರಕಾರ ಕೆಲವು ಆಸ್ತಿಗಳು ಬಂದಿವೆ, ಆದರೆ ಇನ್ನೂ ಕೆಲವು ಆಸ್ತಿಗಳು ಬರಬೇಕಾಗಿದೆ ಅದಕ್ಕಾಗಿ ನಮ್ಮ ತಕರಾರು ಇದೆ ಎಂದು ಸಾಕ್ಷಿ ಹೇಳುತ್ತಾರೆ. ವಿಲ್ ಪ್ರಕಾರ ನಮಗೆ ಇನ್ನೂ ಕೆಲವು ಆಸ್ತಿಗಳು ಬರಬೇಕೆಂದರೆ ಸರಿ. ಈ ರೀತಿ ನಾನು ನನ್ನ ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ವಿಲ್ ನ್ನು ನಾವು ಪ್ರಶ್ನೆ ಮಾಡಿ ಇದೇ ದಾವೆಯಲ್ಲಿ ಕೇಳಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಾತ ವಿಲ್ ಮಾಡಿಲ್ಲ ಎನ್ನುವುದು ನಮ್ಮ ವಾದವಾಗಿರುತ್ತದೆ ಎಂದರೆ ಸರಿಯಲ್ಲ. ವಿಲ್ ಪ್ರಕಾರ ನಾವೆಲ್ಲರೂ ಪ್ರತ್ಯೇಕವಾಗಿ ಸ್ವಾಧೀನದಲ್ಲಿದ್ದು ಈಗ ಪ್ರತಿವಾದಿ 18, 19 , 22 ರಿಂದ 24 ಇವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರಿಚನ್ನಯ್ಯ ಮತ್ತು ಮುನಿಯಮ್ಮ ಇವರ ಆಸ್ತಿಯಲ್ಲಿ ಭಾಗ ಕೇಳಲು ನನಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಪ್ರತಿವಾದಿ 33 ರವರ ವಾರಸುದಾರರ ಪರ ಶ್ರೀ ಎನ್ ಎಸ್ ವಕೀಲರು ಮತ್ತು ಶ್ರೀ ಎನ್ ಎಸ್ ಎಸ್ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**